94-95ರ ವರೆಗೆ ಕೇಂದ್ರ ಸರ್ಕಾರದಿಂದ ವಿಶೇಷ ಘಟಕ ಯೋಜನೆ ಅಡಿಯಲ್ಲಿ ರಾಜ್ಯಕ್ಕೆ ಬಂದ ಹಣ

819 - ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1990 ರಿಂದ 95 ರವರೆಗೆ ರಾಜ್ಯ ಸರ್ಕಾರವು ರಾಜ್ಯ ಸರ್ಕಾರದಿಂದ ವಿಶೇಷ ಘಟಕ ಯೋಜನೆ ಅಡಿ ಪರಿಶಿಷ್ಟ ಜಾತಿಪರಿಶಿಷ್ಟ ವರ್ಗದವರಿಗಾಗಿ ಪಡೆದ ಹಣವೆಷ್ಟು;*

ಆ) *ವಿವಿಧ ಕಾರ್ಯಕ್ರಮಗಳಿಗೆ ಸದರಿ ಅವಧಿಯಲ್ಲಿ ವಿಚ್ಛಾದ ಹಣವೆಷ್ಟು;*

ಇ) *ಈ ಅವಧಿಯಲ್ಲಿ ಎಷ್ಟು ಹಣ ಲ್ಯಾಪ್ಸ್ ಆಗಿರುತ್ತದೆ ಮತ್ತು ಅದಕ್ಕೆ ಕಾರಣವನೇನು?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) 1990 ರಿಂದ 95 ರವರೆಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ ವಿಶೇಷ ಘಟಕ ಯೋಜನೆಗಿರಜನ ಉಪಯೋಜನೆಗಳಡಿ ಪಡೆದ ವಿಶೇಷ ಕೇಂದ್ರೀಯ ಸಹಾಯಧನದ ವಿವರಗಳು ಈ ಕೆಳಕಂಡಂತೆ ಇವೆ:

ವರ್ಷ	ವಿಶೇಷ ಘಟಕ ಯೋಜನೆ	ಗಿರಿಜನ ಉಪಯೋಜನೆ
		ರೂ. ಲಕ್ಷಗಳಲ್ಲಿ
1990-91	953.94	165.65
1991-92	1485.7	1253.24
1992-93	1310.00	327.42
1993-94	1282.71	439.76
1994-95	1873.76	409.03

ಆ) 1993-94ನೇ ಸಾಲಿಗಾಗಿ ಸ್ವೀಕೃತವಾದ ಒಟ್ಟು ವಿಶೇಷ ಕೇಂದ್ರೀಯ ನೆರವನ್ನು ವಿವಿಧ ಕಾರ್ಯಕ್ರಮಗಳಿಗೆ ವ್ಯಯ ಮಾಡಲಾಗಿದೆ. 1994-95ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಒಟ್ಟು ರೂ. 1873.76 ಲಕ್ಷಗಳನ್ನು ವಿಶೇಷ ಕೇಂದ್ರಿಯ ನೆರವಾಗಿ ನೀಡಿದ್ದು, ಅದರಲ್ಲಿ ರೂ. 1604.04 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಗಿರಿಜನ ಉಪಯೋಜನೆಯಡಿಯಲ್ಲಿ ರೂ. 409.03 ಲಕ್ಷಗಳು ಬಂದಿದ್ದು, ಈವರೆಗೆ ರೂ. 381.45 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿದಿರುವ ಕೇಂದ್ರ ಸರ್ಕಾರದಿಂದ ವಿಶೇಷ ನೆರವನ್ನು ಶೀಘ್ರವಾಗಿ ಬಿಡುಗಡೆ ಮಾಡಲಾಗುವುದು.

ಇ) ಈವರೆಗೂ ಯಾವುದೇ ಹಣವನ್ನು ಲ್ಯಾಪ್ಸ್ ಮಾಡಿರುವುದಿಲ್ಲ.

ಗುಂಡ್ಲುಪೇಟೆಗೆ ಕುಡಿಯುವ ನೀರಿನ ಸೌಲಭ್ಯ

514 - ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಂಡ್ಲುಪೇಟೆ ನಗರ ಮತ್ತು ಮಾರ್ಗ ಮಧ್ಯದ ಗ್ರಾಮಗಳಿಗೆ ನಂಜನಗೂಡು ತಾಲ್ಲೂಕಿನಲ್ಲಿ ಕಬಿನಿ ನದಿಯಿಂದ ಕುಡಿಯುವ ನೀರು ಸರಬರಾಜು ಯೋಜನೆ*

ಮಂಜೂರಾಗಿದ್ದು ಸದರಿ ಕಾಮಗಾರಿಯ ಕೆಲಸ ನಿಧಾನವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ ಸದರಿ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಕಬಿನಿ ನದಿಯಿಂದ ಗುಂಡ್ಲುಪೇಟೆ ಪಟ್ಟಣ ಮತ್ತು ಮಾರ್ಗದಲ್ಲಿ ಬರುವ ಹಳ್ಳಿಗಳಿಗೆ ನೀರು ಸರಬರಾಜು ಮಾಡಲು ರೂ. 615.00 ಲಕ್ಷಗಳಿಗೆ ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಈ ಯೋಜನೆಯಡಿಯಲ್ಲಿ ನಂಜನಗೂಡು ತಾಲ್ಲೂಕಿನ ದೇಬೂರು ಗ್ರಾಮದ ಹತ್ತಿರ ಕಬಿನಿ ನದಿ ದಡದಲ್ಲಿ ಜಾಕ್ವೆಲ್ ಕೆಲಸವು ಪ್ರಗತಿಯಲ್ಲಿರುತ್ತದೆ. ಶುದ್ದೀಕರಣಗಾರ ನಿರ್ಮಿಸಲು ಉದ್ದೇಶಿಸಿರುವ ಜಮೀನನು ಸ್ವಾಧೀನ ಪಡಿಸಿಕೊಳ್ಳಲು 4(1) ನಡವಳಿಕೆಗಳು ಪೂರ್ಣಗೊಂಡಿದೆ. ಹಾಗೂ ಪಂಪ್ಹೌಸ್‌ನ ಜಮೀನು ಪಡೆಯಲು ಭೂಸ್ವಾಧೀನದ ನಡವಳಿಕೆಗಳು ಪ್ರಗತಿಯಲ್ಲಿದೆ.

ಎರಡು ಮೇಲಟ್ಟಿದ ಜಲ ಸಂಗ್ರಹಾಗಾರದ ಕಾಮಗಾರಿಯು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲಾಗಿದ್ದು ಕೆಲಸ ನಿಂತಿದೆ. ಕೆಲಸವನ್ನು ಮುಂದುವರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪಟ್ಟಣದ ಕೆಲವು ಭಾಗಗಳಲ್ಲಿ ವಿತರಣಾ ಕೊಳವೆಗಳನ್ನು ಆಳವಡಿಸಲಾಗಿದೆ. 500 ಮಿ.ಮಿ. ವ್ಯಾಸದ ಪಿ.ಎಸ್.ಸಿ. ಏರು ಕೊಳವೆಯನ್ನು ಆಳವಡಿಸಲು ಗುತ್ತಿಗೆದಾರವನ್ನು ಟೆಂಡರ್ ಆಧಾರದ ಮೇಲೆ ನೇಮಿಸಲಾಗಿದೆ. ಈ ಯೋಜನೆಗೆ ಈಗಾಗಲೇ ರೂ. 38.00 ಲಕ್ಷಗಳು ಖರ್ಚಾಗಿರುತ್ತದೆ.

ಆ) ಈ ಯೋಜನೆಗೆ ಬೇಕಾಗುವ ಹಣಕಾಸಿನ ರೂಪುರೇಷೆಗಳು ಈ ಕೆಳಕಂಡಂತಿದೆ.

1.	ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ	194,210 ಲಕ್ಷ
2.	ಹುಡ್ಕೋ ಸಾಲ	210.395 ಲಕ್ಷ
3.	ಸರ್ಕಾರದ ಸಾಲ	126.237 ಲಕ್ಷ
4.	ಗುಂಡ್ಲುಪೇಟೆ ಪುರಸಭೆ	84.158 ಲಕ್ಷ
ಒಟ್ಟು		ರೂ. 615.00 ಲಕ್ಷ

ಪುರಸಭೆಯು ತನ್ನ ವಂತಿಕೆಯನ್ನು ಪಾವತಿಸಿದ ನಂತರ ಮೂರು ವರ್ಷಗಳಲ್ಲಿ ಈ ಕೆಲಸವನ್ನು ಮುಕ್ತಾಯಗೊಳಿಸಲಾಗುವುದು.

ಕುಣಿಕಲ್ಲಿ ಕುಡಿಯುವ ನೀರು ಸೌಲಭ್ಯ ಒದಗಿಸುವ ಬಗ್ಗೆ

484 - ಶ್ರೀ ಎಸ್.ಪಿ. ಮುದಹನುಮೇಗೌಡ (ಕುಣಿಗಲ್) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ). ಕುಣಿಗಲ್ ಪಟ್ಟಣಕ್ಕೆ ಮಾರ್ಕೋನಹಳ್ಳಿ ಜಲಾಶಯದಿಂದ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯು ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ?

ಇ) ಈ ಬಗ್ಗೆ ಕೈಗೊಂಡ ಸರ್ಕಾರದ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :